# ಎನ್‌ಐಟಿಕೆ: ಶ್ರೀನಿವಾಸ ಮಲ್ಯ ಜನ್ಮದಿನ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎನ್‌ಐಟಿಕೆ) ಸಂಸ್ಥಾಪಕ ಯು. ಶ್ರೀನಿವಾಸ ಮಲ್ಯ ಅವರ 122ನೇ ಜನ್ಮದಿನವನ್ನು ಆಚರಿಸಲಾಯಿತು.

ಎನ್‌ಐಟಿಕೆ ಆವರಣದಲ್ಲಿರುವ ಶ್ರೀನಿವಾಸ ಮಲ್ಯ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ.ರವಿ, ಉಪ ನಿರ್ದೇಶಕ ಪ್ರೊ.ಸುಭಾಷ್ ಸಿ. ಯರಗಲ್, ಪದಾಧಿಕಾರಿಗಳು, ಸಿಬ್ಬಂದಿ, ಹಳೆಯ ವಿದ್ಯಾರ್ಥಿಗಳು, ಭಾಗವಹಿಸಿದ್ದರು.



ಸುರತ್ಕಲ್ ಎನ್‌ಐಟಿಕೆಯಲ್ಲಿ ಶ್ರೀನಿವಾಸ ಮಲ್ಯ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು

‘ಶ್ರೀನಿವಾಸ ಮ್ಯಲ ಅವರು ಈ ಭಾಗಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಕರ್ನಾಟಕ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು (ಈಗಿನ ಎನ್‌ಐಟಿಕೆ) ಸ್ಥಾಪನೆಗೆ ಕಾರಣೀಕರ್ತರಾದವರು. ಅವರ ಸಾಧನೆ ಯುವಜನರಿಗೆ ಸ್ಫೂರ್ತಿಯಾಗಿದೆ. ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಧಾರ್ಮಿಕ ಚಟುವಟಿಕೆಗಳಿಗೆ ಅವರು ಉದಾರವಾಗಿ ದೇಣಿಗೆ ನೀಡಿದವರು. ಖಾದಿ ಆಂದೋಲನ, ದೇವಾಲಯಗಳಿಗೆ ಪರಿಶಿಷ್ಟರ ಪ್ರವೇಶ, ಅಸ್ಪೃಶ್ಯತೆ ನಿರ್ಮೂಲನೆಯಂತಹ ಮಹಾತ್ಮ ಗಾಂಧಿ ಅವರ ಕಾರ್ಯಕ್ರಮಗಳನ್ನು ಬೆಂಬಲಿಸಿದವರು’ ಎಂದು ಪ್ರೊ. ಬಿ. ರವಿ ಹೇಳಿದರು.

prajavani, Date: 22/11/24, p, no - 03